ಕವಿತೆ

# ಇಹ-ಪರ

ನಾನು
ಇಹವೆಂದರೆ ಇಹ
ಪರವೆಂದರೆ ಪರ
ಒಟ್ಟಿನಲ್ಲಿ ಇಹವೋ ಪರವೋ
ಏನೆಂದರೂ
ಎರಡು ಎರಡಲ್ಲ

ಬಾಗುವುದೆಂದರೆ
ಕಾಮನಬಿಲ್ಲಾಗುವುದು
ಗಾಳಿ ಬಿಲ್ಲಿನ ಬೆನ್ನೆರಿ
ಪ್ರವಾಹದೆದುರು ಈಜಿ
ದಡದಾಚೆಯ ಗಾಳಿ ತಡಿಕೆಯಲ್ಲಿ
ಉರಿವ ದೀಪವಾಗುವುದು

ಉಸಿರು ಹೊತ್ತಿತು
ಬತ್ತಿ ಚಾಚಿತು
ಬೆರಳ ಸಂಧಿಯಿಂದ
ಆಯುಷ್ಯವೊಂದು ಸರಿದುಹೋಯ್ತು

ನಟ್ಟಿರುಳಲಿ
ನಡುಗಡಲಿನಲ್ಲಿಯೂ ನಾವೆ
ಹಾದಿ ತಪ್ಪುವುದಿಲ್ಲ
ನಕ್ಷತ್ರಗಳ ಹಾದಿ
ಮೀನನ ಹೆಜ್ಜೆಯ ನಾದ
ಎರಡೂ ಬೇರೆಯಲ್ಲ...

ಬೆಳದಿಂಗಳು ಸುಟ್ಟು
ಬೂದಿಯಾದ ಮರಳುಗಾಡನ್ನು ದಾಟಲು
ರಹದಾರಿಯ ಸುಂಕ ಕಟ್ಟಬೇಕು
ಇಹದ ಗಣನೆಗೂ
ಪರದ ಪದವಿಗೂ ನಿರ್ಗುಣಿಯಾಗಬೇಕು!



● **ರೇಣುಕಾ ನಿಡಗುಂದಿ**